
# ಈಜು ಬಾರದ ಪಂಡಿತ


ಒಂದು ಸಲ ಕೆಲವರು ಗಂಗಾನದಿಯನ್ನು ದಾಟುತ್ತಿದ್ದರು. ಅವರಲ್ಲಿ ಒಬ್ಬ ಪಂಡಿತನಿದ್ದ. ಅವನು ಹತ್ತಿರವಿದ್ದ ಪ್ರಯಾಣಿಕನ ಕಡೆ ತಿರುಗಿ
ನಾನು ವೇದವೇದಾಂತ, ಆರು ದರ್ಶನಗಳು ಎಲ್ಲವನ್ನೂ ಓದಿಕೊಂಡಿದ್ದೇನೆ. ನಿನಗೆ ಏನಾದರೂ ವೇದಾಂತ ಗೊತ್ತಿದೆಯೇ?
ಇಲ್ಲ, ಮಹಾಶಯರೇ, ನನಗೆ ಅದು ಗೊತ್ತಿಲ್ಲ.
ಹೋಗಲಿ, ನೀನು ಯಾವ ತತ್ತ್ವಶಾಸ್ತ್ರವನ್ನೂ ಓದಿಲ್ಲವೇ?
ಇಲ್ಲ, ಮಹಾಶಯರೇ, ನನಗೆ ಅದು ಗೊತ್ತಿಲ್ಲ.
ಆಗ ಬಿರುಗಾಳಿ ಎದ್ದು ದೋಣಿ ತೊಯ್ದಾಡಿ ಮುಳುಗುವ ಸ್ಥಿತಿಗೆ ಬಂದಿತು.
ಮಹಾಶಯರೇ, ನಿಮಗೆ ಈಜು ಬರುವುದೇ?
ಅಯ್ಯೋ, ನನಗೆ ಈಜು ಬರುವುದಿಲ್ಲವಲ್ಲ.
ಪ್ರಯಾಣಿಕ ದೋಣಿಯಿಂದ ಧುಮುಕಿ ಈಜಿಕೊಂಡು ಹೋಗಿ ಜೀವ ಉಳಿಸಿಕೊಳ್ಳಲು ಸಿದ್ಧನಾದ.
ನನಗೆ ಸಾಂಖ್ಯ, ಪಾತಂಜಲ ಮುಂತಾದ ಶಾಸ್ತ್ರಗಳು ಗೊತ್ತಿಲ್ಲ. ಅವುಗಳು ಈಗ ನಿಮ್ಮ ಉಪಯೋಗಕ್ಕೆ ಬಾರವು. ನನಗೆ ಈಜು ಬರುವುದು. ಅದರಿಂದ ನನ್ನ ಪ್ರಾಣ ಉಳಿಯುವುದು. ಕೆಲಸಕ್ಕೆ ಬಾರದ ವಿದ್ಯೆಯಿಂದ ಏನು ತಾನೇ ಪ್ರಯೋಜನ?
ಶ್ರೀರಾಮಕೃಷ್ಣರು ಈ ಕಥೆ ಹೇಳಿ ಹೀಗೆ ಹೇಳುತ್ತಿದ್ದರು :
ಹಲವಾರು ಶಾಸ್ತ್ರಗಳನ್ನು ಓದಿ ಏನು ಪ್ರಯೋಜನ ? ದೇವರನ್ನು ಕಾಣುವ ಬಗೆ ತಿಳಿದಿರಬೇಕು. ದೇವರೊಬ್ಬನೇ ಸತ್ಯ. ಅವನಲ್ಲಿ ಭಕ್ತಿ ಮಾಡದೆ ಇದ್ದರೆ ಉಳಿದಿದುದೆಲ್ಲವೂ ವ್ಯರ್ಥ.
ಚಿತ್ರ : ರಾಮಗೌತಮ